# ಆದರ್ಶ ವಿವಾಹ ಯೋಜನೆ

| | | |
|---|---|---|
| 1 | ಈ ಯೋಜನೆ ಎಂದಿನಿಂದ ಜ್ಯಾರಿಯಲ್ಲಿ ಬಂದಿದೆ? | ಈ ಯೋಜನೆ 2007-08ರ ಸಾಲಿನಿಂದ ಜ್ಯಾರಿಯಲ್ಲಿ ಬಂದಿದೆ. |
| 2 | ಸರಕಾರದ ಯಾವ ಆದೇಶದ ಅಡಿಯಲ್ಲಿ ಈ ಯೋಜನೆ ಜ್ಯಾರಿಯಲ್ಲಿ ಬಂದಿದೆ? | ಸರಕಾರದ ಆದೇಶ ಕ್ರ.ಆರ್.ಡಿ/81/ಎಂಎಸ್ ಟಿ/ 2007 ದಿನಾಂಕ:2.5.2007. |
| 3 | ಯೋಜನೆಯ ಮುಖ್ಯ ಉದ್ದೇಶಗಳು ಯಾವುವು? | ರಾಜ್ಯದಲ್ಲಿ ಸರಳ ಸಾಮೂಹಿಕ ವಿವಾಹ ಜನಪ್ರಿಯ ಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶ ವಾಗಿದೆ. |
| 4 | ಈ ಯೋಜನೆ ಅಡಿಯಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಕನಿಷ್ಠ ಎಷ್ಟು ವಿವಾಹ ನಡೆದಿರಬೇಕು? | ಕನಿಷ್ಠ 25 ವಿವಾಹಗಳು. |
| 5 | ಯೋಜನೆಯ ಮುಖ್ಯ ರೂಪ ರೇಶೆಗಳು ಯಾವುವು? | 1) ಈ ಯೋಜನೆ ಅಡಿಯಲ್ಲಿ ವಿವಾಹವಾಗುವ ದಂಪತಿಗಳಲ್ಲಿ ವಧುವಿನ ಹೆಸರಿಗೆ ರೂ.10,000/-ವನ್ನು 2 ವರ್ಷಗಳ ಅವಧಿ ಯವರೆಗೆ ನಿಶ್ಚಿತ ಠೇವಣಿಯಲ್ಲಿ ಇಡಲಾಗುವುದು.<br>2) ಈ ವಿವಾಹವಾಗುವ ವಧುವರರಿಗೆ ಈ ಮೊದಲೇ ಮದುವೆಯಾಗಿ ಜೀವಂತ ಪತಿ ಅಥವಾ ಪತ್ನಿ ಇರಬಾರದು.<br>3) ಮದುವೆ ಆಗುವ ವಧು-ವರರು ಕನಿಷ್ಠ ವಯೋಮಿತಿ ಮೀರಿರಬೇಕು.<br>4) ಪ್ರೋತ್ಸಾಹ ಧನ ಪಡೆಯಲು ವಧು-ವರರು ವಿವಾಹ ನೋಂದಣಿ ಮಾಡಿಸಿರಬೇಕು. ಹಾಗೂ ವಿವಾಹ ನೋಂದಣಿ ಪತ್ರ ಪಡೆಯಬೇಕು. |
| 10 | ವಯಸ್ಸಿನ ದಾಖಲೆ | ಮತದಾರರ ಗುರುತಿನ ಚೀಟಿಯಲ್ಲಿರುವ ಜನ್ಮ ದಿನಾಂಕವು ವಯಸ್ಸಿಗೆ ದಾಖಲೆ. |
| 7 | ಅರ್ಜಿಯೊಂದಿಗೆ ಯಾವ ದಾಖಲೆ ಗಳನ್ನು ಲಗತ್ತಿಸಬೇಕು? | 1) ವಧು-ವರರ ವಯಸ್ಸಿನ ಬಗ್ಗೆ ದಾಖಲೆ.<br>2) ಈ ಯೋಜನೆ ಅಡಿಯಲ್ಲಿ ವಿವಾಹವಾದ ಬಗ್ಗೆ ವಿವಾಹ ನೋಂದಣಿ ದಾಖಲೆ.<br>3) ಮೊದಲಿನ ಪತಿ / ಪತ್ನಿಗೆ ಸಂಬಂಧಿಸಿದಂತೆ ವಿಚ್ಛೇದನಾ/ಮರಣ ದಾಖಲೆ.<br>4) ಸಾಮೂಹಿಕ ವಿವಾಹ ಸಂಘಟಣೆದಾರರ ಪ್ರಮಾಣ ಪತ್ರ.<br>5) ವಿವಾಹಿತ ಜೋಡಿಯ ಭಾವ ಚಿತ್ರ, ಹಾಗೂ ಅದರ ನೆಗೆಟಿವ್.<br>6) ಜಾತಿ ಪ್ರಮಾಣ ಪತ್ರ. |

..2.

| | | |
|---|---|---|
| 8 | ಅರ್ಜಿಯನ್ನು ಯಾರಿಗೆ ಸಲ್ಲಿಸಬೇಕು? | ಅರ್ಜಿಯನ್ನು ಸಂಬಂಧಿಸಿದ ತಾಲೂಕಿನ ತಹಶೀಲ್ದಾರರಿಗೆ ಸಲ್ಲಿಸಬೇಕು. |
| 9 | ಈ ಯೋಜನೆಯ ಅಡಿಯಲ್ಲಿ ಸಂಘಟಕರಿಗೆ ಪ್ರೋತ್ಸಾಹ ಧನ ನೀಡಲಾಗುವುದೋ ಹೇಗೆ? | ಈ ಕಾರ್ಯಕ್ರಮ ಅಡಿಯಲ್ಲಿ ಕನಿಷ್ಠ 25 ಜೋಡಿ ವಿವಾಹ ಸಂಘಟಿಸುವ ಸಂಘಟನೆಗೆ ಪ್ರತಿ ಜೋಡಿಗೆ ರೂ.100/-ರಂತೆ ಪ್ರೋತ್ಸಾಹ ಧನಕ್ಕೆ ಅರ್ಹ ರಾಗುವರು. |